# Annual Cultural fest ATMEya-2k25

## “Ability beyond disability”

ATMEya is the annual college cultural fest that ATME has been organizing since the Inception of this college from 2010. The students, staff and Management of this institution have repeatedly established standards which have been constantly beaten in the consecutive years. ATMEya has been based on a wide array of themes - from Traffic Awareness, Amar Jawan to Lead the Blind and Arise-Awake-Adopt Orphans. This year ATMEya is based on the theme “**Ability beyond disability”** held on 23rd and 24th May 2025.

## Ability beyond disability

**"Ability Beyond Disability"** — this powerful theme for the college annual fest celebrates the indomitable spirit of individuals who rise above limitations to showcase their unique strengths and talents. It reflects the belief that true ability lies not in physical or mental perfection, but in courage, determination, and resilience. The fest aims to create an inclusive platform where every voice is heard, every effort is valued, and every achievement is celebrated, regardless of challenges. Through this theme, we recognize that disability is not inability — rather, it is an opportunity to redefine boundaries, inspire change, and embrace the diverse potential within us

To mark the beginning of the college annual fest the official logo launch of ATMEya-2025 was held at 03.30 PM on 14th May 2025 followed by Flash Mob. The official logo was unveiled by Chief Guest Mr. Shivshankar, Secretary. Dr. Basavaraj L, Principal, Dr. Sachidananda Murthy K L, Administrative Officer and Dr. Srinivasa K, Dean Student Affairs, Dr. Putte Gowda, Cultural Committee Chairman, HoD's, staffs and Student were present during the event.






Revealing of Atmeya 25 logo






**BLOOD DONATION CAMP**

On Account of ATMEYA-25, NSS unit of ATMECE in association with Red- Cross Blood Bank, Bangalore organized **a BLOOD DONATION CAMP** for students and staff of ATMECE on 15th May 2025 from 09.30 AM to 04.00 PM. Blood donation is a gesture of goodwill and blood donation can save the lives of people in need. Donors including staffs and students donated blood and made this event successful







Blood Donation by students and Faculties



ಆತ್ಮೀಯ-25 ಪ್ರಯುಕ್ತ ಬೃಹತ್ ರಕ್ತದಾನ ಶಿಬಿರ

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ 'ಆತ್ಮೀಯ-25' ಪ್ರಯುಕ್ತ ಗುರುವಾರ ಕಾಲೇಜಿನ ಎನ್ಎಸ್ಎಸ್ ಘಟಕ, ಬೆಂಗಳೂರಿನ ರೋಟರಿ ದಕ್ಷಿಣ, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವತಿಯಿಂದ ಬೃಹತ್ ರಕ್ತದಾನ ಹಾಗೂ ಹೃದಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಪಲ್ಲವಿ ಅರುಣ್ ಕುಮಾರ್ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ರಕ್ತದಾನವೆಂಬುದು ಅತ್ಯಂತ ಶ್ರೇಷ್ಠದಾನವಾಗಿದೆ. ನಾವು ನೀಡುವ ಸ್ವಲ್ಪ ಪ್ರಮಾಣದ ರಕ್ತದಿಂದ ಅಮೂಲ್ಯವಾದ ಜೀವಗಳನ್ನು ಕಾಪಾಡ ಬಹುದು, ಎಟಿಎಂಇ ಕಾಲೇಜು ಹಮ್ಮಿಕೊಂಡಿರುವ ಸಾಮಾಜಿಕ ಕಳಕಳಿಯ ಈ ಕಾರ್ಯಕ್ರಮ ಅತ್ಯಂತ ಶ್ಲಾಘನೀಯ ಎಂದರು.ಇದೇ ಸಂದರ್ಭ ಬೆಂಗಳೂರಿನ ರೋಟರಿ ದಕ್ಷಿಣ ವತಿಯಿಂದ ಸಿವಿಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಸೃಷ್ಠಿ ಅವರಿಗೆ 10,000 ರೂ.ಗಳ ಆರ್ಥಿಕ ನೆರವಿನ ಚೆಕ್ ಹಸ್ತಾಂತರಿಸಲಾಯಿತು.ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಎಲ್. ಬಸವರಾಜ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ, ಡೀನ್ ಡಾ.ಶ್ರೀನಿವಾಸ, 'ಆತ್ಮೀಯ-2025' ಮುಖ್ಯಸ್ಥ ಡಾ.ಪುಟ್ಟೇಗೌಡ, ಶಿಬಿರದ ಸಂಯೋಜಕರಾದ ಪ್ರೊ.ಎ.ಎನ್. ರುದ್ರೇಶ್, ಡಾ.ಮುರಳೀಧರ್, ಪ್ರೊ.ರಘು, ಪ್ರೊ.ಶ್ರುತಿ, ಪ್ರೊ. ಕೀರ್ತಿಕುಂಬಾರ್, ಪ್ರೊ.ಅನುಪಮಾಶೆಟ್ಟರ್, ಪ್ರೊ..ಜಸ್ಲೀನ್, ರೆಡ್‌ಕ್ರಾಸ್‌ನ ಡಾ. ಶ್ಯಾಂಸುಂದರ್ ಇದ್ದರು.

■ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ

ವಿಜಯವಾಣಿ ಚಿತ್ರ

ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಪ್ರಯುಕ್ತ ರಕ್ತದಾನ ಶಿಬಿರ ನಡೆಯಿತು.

**MARATHON-2k25**

In connection with college annual fest ATMEya- 2025, ATME College of Engineering organized the Marathon on 17th May 2025 at 6.30 am.

The marathon was organized at Ovals Ground, Mysuru. It was inaugurated by Prof C Venkatesh, Director, Physical Education Dept, University of Mysuru. The guest of honor Ms. Chaithra B, International Kho-Kho Player, was also present during the occasion. The secretary of ATME Trust, Mr. Shivashankar, Treasurer R. Veeresh, Member Venkatesh H, Administrative Officer Dr. Sachidananda Murthy K L, Principal Dr. L. Basavaraj were present at the event.

The marathon comprised of 5.3 kilometers. Around 600+ students participated in the Marathon



*Winners of Marathon 25*




*Honoring the Chief Guest during Inauguration of Marathon 25*




*Marathon 25*



# ಗಮನ ಸೆಳೆದ ಆತ್ಮೀಯ-2ಕೆ25 ಮ್ಯಾರಥಾನ್

## ಸಹಸ್ರಾರು ವಿದ್ಯಾರ್ಥಿಗಳು ಭಾಗಿ; ವಿಜೇತರಿಗೆ ಬಹುಮಾನ ವಿತರಣೆ



ಖೋ ಖೋ ಆಟಗಾರ್ತಿ ಬಿ.ಚೈತ್ರಾ ಚಾಲನೆ | ಎಟಿಎಂಇ ಕಾಲೇಜು ವಾರ್ಷಿಕೋತ್ಸವ

# ವಿದ್ಯಾರ್ಥಿಗಳು, ಸಾರ್ವಜನಿಕರ ಮ್ಯಾರಥಾನ್

***SPORTS***

Because of Atmeya 2k25, Sports events were organized from 19th May to 21st of May










*Intra College Sports Competition*

ATMEya-2025 was officially inaugurated on 23rd May 2025. On this occasion, Sri Nataraj S, Joint Director, Directorate for Empowerment of Differently abled and Senior Citizen, Bangalore inaugurated the event. Sri Virat, Film actor, Sandalwood and Sri N Shridhara Dixith, Vice President, State Disabilities Association, Mysore were the Guest of the event. During the program, needy individuals were distributed with the cheques. Sri L. Arun Kumar, Chairman, ATMECE presided over the function. Sr. K Shivshankar, secretary, Sri. R Veeresh, Treasurer, Dr. L Basavaraj, Principal, Dr. Putte Gowda G, Cultural committee Chairman, Dr. Srinivasa K, Dean, Student Affairs were also present.

ATMECE honoured the students who represented the VTU sports team in various sporting events and extended financial support to underprivileged individuals with disabilities.



*Inauguration of ATMEYA 25 by watering the plant*

# Honoring the guests




*ATME donation to the needy disabled*



*Guests on Dias during Inaugural Ceremony*



*Speech by Guest and proud alumni Sri Virat, sandalwood actor*




*Students representing different Sports in University/Regional / National level were felicitated.*




Unveiling of College New logo

# Glimpses of Day 1 Cultural event











## Day 2, May 24th: Glimpses of Day 2







## ALL OK Team performed live musical Concert








**Cheering Student Crowd**

**Honoring All OK**

Affiliated to VTU, Belagavi, Approved by AICTE, New Delhi and Recognized by Government of Karnataka,
Programs accredited by NBA, New Delhi - **UG:** CV, ECE, EEE and ME (Validity up to June 2025), **UG:** CSE (Validity up to June 2026)

# News Paper articles of Atmeya 2k25

ಆಂದೋಲನ

## ಗಮನ ಸೆಳೆದ ಆತ್ಮೀಯ-2ಕೆ25 ಮ್ಯಾರಥಾನ್

### ಸಹಸ್ರಾರು ವಿದ್ಯಾರ್ಥಿಗಳು ಭಾಗಿ; ವಿಜೇತರಿಗೆ ಬಹುಮಾನ ವಿತರಣೆ




ಮೈಸೂರು: 'ವೈಕಲ್ಯತೆಯನ್ನು ಮೀರಿದ ಸಾಮರ್ಥ್ಯ' ಎಂಬ ಘೋಷವಾಕ್ಯದೊಂದಿಗೆ ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ 'ಆತ್ಮೀಯ-2ಕೆ25'ರ ಅಂಗವಾಗಿ ನಡೆದ ಮ್ಯಾರಥಾನ್ ಸ್ಪರ್ಧೆ ಸಾರ್ವಜನಿಕರ ಗಮನಸೆಳೆಯಿತು.

ನಗರದ ಮೈಸೂರು ವಿಶ್ವವಿದ್ಯಾನಿಲಯ ಓವೆಲ್ ಮೈದಾನದಲ್ಲಿ ನಡೆದ 5.6 ಕಿಲೋ ಮೀಟರ್ ಉದ್ದದ ಮ್ಯಾರಥಾನ್‌ಗೆ ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ ಬಿ.ಚೈತ್ರಾ ಚಾಲನೆ ನೀಡಿದರು. ಈ ಸ್ಪರ್ಧೆಯಲ್ಲಿ 1,100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಬಳಿಕ ಮೈಸೂರು ವಿವಿ ಓವೆಲ್ ಮೈದಾನದಿಂದ ಆರಂಭವಾದ ಮ್ಯಾರಥಾನ್ ಹಳೇ ಜಿಲ್ಲಾ ಪಂಚಾಯಿತಿ ರಸ್ತೆಯ ಮಾರ್ಗವಾಗಿ ಸಾಗಿ, ಜಯನಗರ ರೈಲ್ವೆ ಸೇತುವೆ, ಕುಕ್ಕರಹಳ್ಳಿ ಕೆರೆ, ಹಳೆ ಜಿಲ್ಲಾಧಿಕಾರಿ ಕಚೇರಿ ಮಾರ್ಗ ವಾಗಿ ಆಗಮಿಸಿ ಓವೆಲ್ ಮೈದಾನದಲ್ಲಿ ಮುಕ್ತಾಯವಾಯಿತು.

ಈ ವೇಳೆ ಮೈಸೂರು ವಿವಿ ದೈಹಿಕ ಹಾಗೂ ಕ್ರೀಡಾ ವಿಜ್ಞಾನ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಮಾತನಾಡಿ, ಕ್ರೀಡೆ ಮತ್ತು ಓಟದಿಂದ ಉತ್ತಮವಾದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಇಂದಿನ ಒತ್ತಡಯುಕ್ತ ಜೀವನದಲ್ಲಿ ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳು ನಮ್ಮ ನಿತ್ಯದ ಮಂತ್ರವಾಗಬೇಕು ಎಂದು ಸಲಹೆ ನೀಡಿದರು.

ಕಾಲೇಜಿನ ಆಡಳಿತ ಮಂಡಳಿ ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದ ಮೂರ್ತಿ, ಪ್ರಾಂಶುಪಾಲ ಡಾ.ಎಲ್.ಬಸವರಾಜ್, ಡೀನ್ ಡಾ.ಕೆ.ಶ್ರೀನಿವಾಸ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಎಲ್.ಪುಟ್ಟೇಗೌಡ, ಪ್ರೊ.ಚಂದ್ರಶೇಖರ್, ಪ್ರೊ.ರೋಹಿತ್, ಪ್ರೊ.ಜಸ್ಲೀನ್ ಹಾಜರಿದ್ದರು.

**ಮ್ಯಾರಥಾನ್ ಸ್ಪರ್ಧೆ ವಿಜೇತರ ವಿವರ:ವಿದ್ಯಾರ್ಥಿನಿಯರ ವಿಭಾಗ:** ಸಿವಿಲ್ ವಿಭಾಗದ ಅಪೂರ್ವ(ಪ್ರ), ಇಇ ವಿಭಾಗದ ಅಂಕಿತ(ದ್ವಿ), ಸಿಎಸ್‌ಇ ವಿಭಾಗದಲ್ಲಿ ಹರ್ಷಿತಾ(ತೃ), **ವಿದ್ಯಾರ್ಥಿಗಳ ವಿಭಾಗ:** ಇಸಿ ವಿಭಾಗದಲ್ಲಿ ಕುಶಾಲ್(ಪ್ರ), ಎಐಎಂಎಲ್ ವಿಭಾಗದ ಸಿ.ರೇವಂತ್(ದ್ವಿ), ಸಿ.ಎಸ್.ಡಿಸೈನ್ ವಿಭಾಗದ ಪವನ್(ತೃ), **ಅಧ್ಯಾಪಕರ ವಿಭಾಗ:** ಜಿ.ಎಸ್.ನಂದಿನಿ(ಪ್ರ), ಮೈತ್ರಿ(ದ್ವಿ), ಕಾವ್ಯಶ್ರೀ(ತೃ), **ಸಿಬ್ಬಂದಿ ವಿಭಾಗ:** ಕೆ.ಮನುಕುಮಾರ್(ಪ್ರ), ಸತೀಶ್(ದ್ವಿ), ಪ್ರೊ.ರಂಗಸ್ವಾಮಿ(ತೃ), **ಸಾರ್ವಜನಿಕರ ವಿಭಾಗ:** ಮಹದೇವ ಸ್ವಾಮಿ(ಪ್ರ), ಶಶಾಂಕ್ ಕೆ.ಗೌಡ(ದ್ವಿ), ಆದಿತ್ಯ(ತೃ) ಪಡೆದರು. ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ನಗದು ಬಹುಮಾನ ವಿತರಿಸಲಾಯಿತು.

Main Edition
May 18, 2025 Page No. 4
Powered by: erelego.com

ಖೋ ಖೋ ಆಟಗಾರ್ತಿ ಬಿ.ಚೈತ್ರಾ ಚಾಲನೆ | ಎಟಿಎಂಇ ಕಾಲೇಜು ವಾರ್ಷಿಕೋತ್ಸವ

## ವಿದ್ಯಾರ್ಥಿಗಳು, ಸಾರ್ವಜನಿಕರ ಮ್ಯಾರಥಾನ್

**ವಿಜಯವಾಣಿ ಸುದ್ದಿಜಾಲ ಮೈಸೂರು**

ನಗರದ ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ 'ಆತ್ಮೀಯ-2ಕೆ25' ಅಂಗವಾಗಿ 'ವೈಕಲ್ಯತೆಯನ್ನು ಮೀರಿದ ಸಾಮರ್ಥ್ಯ' ಎಂಬ ಘೋಷವಾಕ್ಯದೊಂದಿಗೆ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಮ್ಯಾರಥಾನ್ ಓಟವನ್ನು ನಗರದ ಮೈವಿವಿಯ ಓವೆಲ್ ಮೈದಾನದಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಭಾರತೀಯ ಮಹಿಳಾ ತಂಡದ ಖೋ ಖೋ ಆಟಗಾರ್ತಿ ಬಿ.ಚೈತ್ರಾ ಅವರು, ನಿರಂತರ ಶ್ರಮ ಮತ್ತು ಪ್ರಯತ್ನದಿಂದ ಜೀವನದಲ್ಲಿ ಅಂದು ಕೊಂಡಿದ್ದನ್ನು ಸಾಧಿಸಬಹುದು. ಗೆದ್ದಾಗ ಬೀಗದೆ, ಸೋತಾಗ ಕುಗ್ಗದೆ ಸೋಲು-ಗೆಲುವನ್ನು ಜೀವನದಲ್ಲಿ ಸಮಾನಾಗಿ ಸ್ವೀಕರಿಸಬೇಕು ಎಂದು ತಿಳಿಸಿದರು. ಎಟಿಎಂಇ ಕಾಲೇಜು ಪ್ರತಿ ವರ್ಷವೂ ಒಂದೊಂದು ಸಾಮಾಜಿಕ ಕಳಕಳಿಯ ಉದ್ದೇಶ ಇಟ್ಟುಕೊಂಡು ವಾರ್ಷಿಕೋತ್ಸವ ಆಚರಿಸುತ್ತಿರುವುದು ಶ್ಲಾಘನೀಯ ಎಂದರು.

ಮೈವಿವಿ ದೈಹಿಕ ಹಾಗೂ ಕ್ರೀಡಾ ವಿಜ್ಞಾನ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಮಾತನಾಡಿ, ಕ್ರೀಡೆ ಮತ್ತು ಓಟದಿಂದ ಉತ್ತಮವಾದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಇಂದಿನ ಒತ್ತಡ ಜೀವನದಲ್ಲಿ ಕ್ರೀಡೆ ಮತ್ತು ದೈಹಿಕ ಚಟುವಟಿಕೆ ನಿತ್ಯದ ಮಂತ್ರವಾಗಬೇಕು ಎಂದು ಸಲಹೆ ನೀಡಿದರು. 5.6 ಕಿ.ಮೀ ಮ್ಯಾರಥಾನ್ ಓವೆಲ್ ಮೈದಾನದಿಂದ ಹೊರಟು ನ್ಯಾಯಾಲಯದ ಎದುರಿನ ರಸ್ತೆ ಮೂಲಕ ಸಾಗಿ ಜಯನಗರ ರೈಲ್ವೇ ಸೇತುವೆ, ಸರಸ್ವತಿ ಚಿತ್ರಮಂದಿರ ಮುಂಭಾಗದ ರಸ್ತೆಯ ಮೂಲಕ ಕುಕ್ಕರಹಳ್ಳಿ ಕೆರೆ, ಕಲಾಮಂದಿರದ ಪಕ್ಕದ ರಸ್ತೆಯ ಮೂಲಕ ಹುಣಸೂರು ರಸ್ತೆ ತಲುಪಿ ಹಳೇ ಜಿಲ್ಲಾಧಿಕಾರಿ ಕಚೇರಿ ಮೂಲಕ ಮತ್ತೆ ಓವೆಲ್ ಮೈದಾನದಲ್ಲಿ ಮುಕ್ತಾಯವಾಯಿತು. ಸುಮಾರು 1100 ವಿದ್ಯಾರ್ಥಿಗಳು ಮ್ಯಾರಥಾನ್ ಓಟದಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿನಿಯರ ವಿಭಾಗದಲ್ಲಿ ಅಪೂರ್ವ (ಸಿವಿಲ್ ವಿಭಾಗ) ಪ್ರಥಮ, ಸ್ಥಾನ ಅಂಕಿತ (ಇಇ ವಿಭಾಗ) ದ್ವಿತೀಯ, ಹರ್ಷಿತಾ (ಸಿ.ಎಸ್‌ಇ ವಿಭಾಗ) ತೃತಿಯ ಸ್ಥಾನ, ವಿದ್ಯಾರ್ಥಿಗಳ ವಿಭಾಗದಲ್ಲಿ ಕುಶಾಲ್ ಪ್ರಥಮ (ಇಸಿ ವಿಭಾಗ), ಸಿ.ರೇವಂತ್ ದ್ವಿತೀಯ (ಎಐಎಂಎಲ್ ವಿಭಾಗ), ಪವನ್ (ಸಿ.ಎಸ್ ಡಿಸೈನ್ ವಿಭಾಗ) ತೃತಿಯ ಸ್ಥಾನ ಪಡೆದರು. ಅಧ್ಯಾಪಕರ ವಿಭಾಗದಿಂದ ಜಿ.ಎಸ್.ನಂದಿನಿ ಪ್ರಥಮ, ಮೈತ್ರಿ ದ್ವಿತೀಯ, ಕಾವ್ಯಶ್ರೀ ಮೂರನೇ ಸ್ಥಾನ ಪಡೆದರು. ಸಿಬ್ಬಂದಿ ವಿಭಾಗದಲ್ಲಿ ಕೆ.ಮನುಕುಮಾರ್ ಪ್ರಥಮ, ಸತೀಶ್ ದ್ವಿತೀಯ, ಪ್ರೊ.ರಂಗಸ್ವಾಮಿ ತೃತಿಯ ಸ್ಥಾನ ಪಡೆದರು. ಸಾರ್ವಜನಿಕರ ವಿಭಾಗದಲ್ಲಿ ಮಹದೇವಸ್ವಾಮಿ ಪ್ರಥಮ, ಶಶಾಂಕ್ ಕೆ.ಗೌಡ ದ್ವಿತೀಯ, ಆದಿತ್ಯ ತೃತಿಯ ಸ್ಥಾನ ಪಡೆದುಕೊಂಡರು.

ನಂತರ ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ನಗದು ಬಹುಮಾನ ವಿತರಿಸಲಾಯಿತು. ಕಾಲೇಜಿನ ಆಡಳಿತ ಮಂಡಳಿ ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ, ಪ್ರಾಂಶುಪಾಲ ಡಾ.ಎಲ್.ಬಸವರಾಜ್, ಡೀನ್ ಡಾ.ಶ್ರೀನಿವಾಸ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಪುಟ್ಟೇಗೌಡ, ಪ್ರೊ. ಚಂದ್ರಶೇಖರ್, ಪ್ರೊ. ರೋಹಿತ್, ಪ್ರೊ.ಜಸ್ಲೀನ್, ವಿದ್ಯಾರ್ಥಿ ಸಂಘದ ಸಂತೋಷ್ ಭಾಗವಹಿಸಿದ್ದರು.



ನಗರದ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ 'ಆತ್ಮೀಯ-2ಕೆ25' ಅಂಗವಾಗಿ 'ವೈಕಲ್ಯತೆಯನ್ನು ಮೀರಿದ ಸಾಮರ್ಥ್ಯ' ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ ವಿವಿಧ ವಿಭಾಗದ ವಿಜೇತರು.

ಆಂದೋಲನ

## ಎಟಿಎಂಇ ಕಾಲೇಜು ವಾರ್ಷಿಕೋತ್ಸವ

### 'ಆತ್ಮೀಯ-2ಕೆ25' ಸಂಭ್ರಮಾಚರಣೆ



ಮೈಸೂರು: ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಕಾಲೇಜಿನ ವಾರ್ಷಿಕೋತ್ಸವ 'ಆತ್ಮೀಯ-2ಕೆ25' ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಜಿಲ್ಲಾ ವಿಶೇಷಚೇತನ ಮತ್ತು ಅಂಗವಿಕಲ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ್, ಗೌರವ ಅತಿಥಿಗಳಾಗಿದ್ದ ರಾಜ್ಯ ಅಂಗವಿಕಲರ ಸಂಘದ ಉಪಾಧ್ಯಕ್ಷ ಶ್ರೀಧರ ದೀಕ್ಷಿತ್ ಮತ್ತು ಉದಯೋನ್ಮುಖ ನಟ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿ ವಿರಾಟ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಕಳಕಳಿಯನ್ನು ಮೂಡಿಸುವ ಉದ್ದೇಶದಿಂದ ಪ್ರತಿವರ್ಷವೂ ಸಮಾಜದಲ್ಲಿನ ಅಶಕ್ತರು, ವಿಶೇಷಚೇತನರು, ಹುತಾತ್ಮ ಸೈನಿಕರ ಕುಟುಂಬಗಳಿಗೆ ಸಂಸ್ಥೆಗಳ ವತಿಯಿಂದ ಆರ್ಥಿಕ ನೆರವು ನೀಡಲಾಗುತ್ತಿದೆ. ಅದೇ ರೀತಿ ಈ ವರ್ಷವೂ ಅವಶ್ಯವಿರುವ ಮೂವರು ವಿಶೇಷಚೇತನರಿಗೆ ಧನಸಹಾಯ ಮಾಡಲಾಯಿತು.

ಈ ವೇಳೆ ಮಾತನಾಡಿದ ಶಂಕರಗೌಡ ಪಾಟೀಲ್ ಅವರು, ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ವಾರ್ಷಿಕೋತ್ಸವ ಆಚರಣೆ ಮಾಡುವುದು ಮಾದರಿ ವಿಷಯ ಎಂದರು.

ಶ್ರೀಧರ ದೀಕ್ಷಿತ್ ಅವರು ಮಾತನಾಡಿ, ವಿಶೇಷಚೇತನರು ಮತ್ತು ಅಂಗವಿಕಲರು ಆತ್ಮಸ್ಥೈರ್ಯದಿಂದ ಬದುಕಬೇಕು. ಹಾಗೆಯೇ ವಿಶೇಷಚೇತನರಿಗೆ ಸಹಾಯ ಹಸ್ತ ನೀಡುತ್ತಿರುವ ಎಟಿಎಂಇ ಸಂಸ್ಥೆ ಕಾರ್ಯ ನಿಜಕ್ಕೂ ಮಾದರಿಯಾಗಿದೆ ಎಂದರು.

ಇದೇ ವೇಳೆ ವಿಶೇಷಚೇತನ ಶ್ರೀಧರ ದೀಕ್ಷಿತ್ ಅವರು, ನಾಗಭೂಷಣ ಎಂಬ ಅನಾಥಾಶ್ರಮವೊಂದರ ದೃಷ್ಟಿಮಾಂದ್ಯ ವಿಶೇಷಚೇತನ ವ್ಯಕ್ತಿ ಹಾಗೂ ಬಹು ಅಂಗವೈಕಲ್ಯ ಇರುವ ಒಂಟಿಕೊಪ್ಪಲು ರವಿ ಎಂಬುವರಿಗೆ ಎಟಿಎಂಇ ಆಡಳಿತ ಮಂಡಳಿ ಅಧ್ಯಕ್ಷ ಎಲ್.ಅರುಣ್ ಕುಮಾರ್, ಆಡಳಿತ ಮಂಡಳಿ ಪದಾಧಿಕಾರಿಗಳ ಪರವಾಗಿ ಆರ್ಥಿಕ ನೆರವಿನ ಚೆಕ್ ನೀಡಿ ಅಭಿನಂದಿಸಿದರು.

ಎಲ್.ಅರುಣ್‌ಕುಮಾರ್ ಅವರು ಎಟಿಎಂಇ ಕಾಲೇಜಿನ ನವೀಕೃತ ಲಾಂಛನವನ್ನು ಬಿಡುಗಡೆಗೊಳಿಸಿ ಮಾತನಾಡಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಟ ವಿರಾಟ್ ವಿದ್ಯಾರ್ಥಿಗಳೊಂದಿಗೆ ವೇದಿಕೆಯಲ್ಲಿ ನೃತ್ಯ ಮಾಡಿ ಎಲ್ಲರನ್ನೂ ರಂಜಿಸಿದರು.

ಆಡಳಿತ ಮಂಡಳಿ ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್, ಟ್ರಸ್ಟಿ ಎಚ್.ವೆಂಕಟೇಶ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ, ಪ್ರಾಂಶುಪಾಲರಾದ ಡಾ.ಎಲ್.ಬಸವರಾಜ್, ಡೀನ್ ಡಾ.ಕೆ.ಶ್ರೀನಿವಾಸ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಪುಟ್ಟೇಗೌಡ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಂತೋಷ್ ಮತ್ತು ಪದಾಧಿಕಾರಿಗಳು ಸೇರಿದಂತೆ ಕಾಲೇಜಿನ ಸಿಬ್ಬಂದಿ ವರ್ಗದವರು, ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರೊ.ಸಿ.ಚಂದ್ರಶೇಖರ್ ಮತ್ತು ಪ್ರೊ.ಎಂ.ಎಂ.ಕೀರ್ತನಾ ವೇದಿಕೆ ಕಾರ್ಯಕ್ರಮ ನಿರೂಪಿಸಿದರು, ಡಾ.ಎಲ್.ಬಸವರಾಜ್ ಸ್ವಾಗತಿಸಿದರು. ಡಾ.ಶ್ರೀನಿವಾಸ ವಂದಿಸಿದರು. ಡಾ. ಪುಟ್ಟೇಗೌಡ ಆತ್ಮೀಯ-2ಕೆ25 ವರದಿ ಮಂಡಿಸಿದರು. ಪ್ರೊ.ಸ್ಫೂರ್ತಿ ಪ್ರಾರ್ಥನೆ ಮಾಡಿದರು.

## ಆತ್ಮೀಯ-25 ಪ್ರಯುಕ್ತ ಬೃಹತ್ ರಕ್ತದಾನ ಶಿಬಿರ

■ ವಿಜಯವಾಣಿ ಸುದ್ದಿಜಾಲ ಮೈಸೂರು

■ **ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ**

ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ 'ಆತ್ಮೀಯ-25' ಪ್ರಯುಕ್ತ ಗುರುವಾರ ಕಾಲೇಜಿನ ಎನ್‌ಎಸ್‌ಎಸ್ ಘಟಕ, ಬೆಂಗಳೂರಿನ ರೋಟರಿ ದಕ್ಷಿಣ, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವತಿಯಿಂದ ಬೃಹತ್ ರಕ್ತದಾನ ಹಾಗೂ ಹೃದಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಪಲ್ಲವಿ ಅರುಣ್ ಕುಮಾರ್ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ರಕ್ತದಾನವೆಂಬುದು ಅತ್ಯಂತ ಶ್ರೇಷ್ಠದಾನವಾಗಿದೆ. ನಾವು ನೀಡುವ ಸ್ವಲ್ಪ ಪ್ರಮಾಣದ ರಕ್ತದಿಂದ ಅಮೂಲ್ಯವಾದ ಜೀವಗಳನ್ನು ಕಾಪಾಡ ಬಹುದು, ಎಟಿಎಂಇ ಕಾಲೇಜು ಹಮ್ಮಿಕೊಂಡಿರುವ ಸಾಮಾಜಿಕ ಕಳಕಳಿಯ ಈ ಕಾರ್ಯಕ್ರಮ ಅತ್ಯಂತ ಶ್ಲಾಘನೀಯ ಎಂದರು.ಇದೇ ಸಂದರ್ಭ ಬೆಂಗಳೂರಿನ ರೋಟರಿ ದಕ್ಷಿಣ ವತಿಯಿಂದ ಸಿವಿಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಸೃಷ್ಠಿ ಅವರಿಗೆ 10,000 ರೂ.ಗಳ ಆರ್ಥಿಕ ನೆರವಿನ ಚೆಕ್ ಹಸ್ತಾಂತರಿಸಲಾಯಿತು.ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಎಲ್. ಬಸವರಾಜ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ, ಡೀನ್ ಡಾ.ಶ್ರೀನಿವಾಸ, 'ಆತ್ಮೀಯ-2025' ಮುಖ್ಯಸ್ಥ ಡಾ.ಪುಟ್ಟೇಗೌಡ, ಶಿಬಿರದ ಸಂಯೋಜಕರಾದ ಪ್ರೊ.ಎ.ಎನ್. ರುದ್ರೇಶ್, ಡಾ.ಮುರಳೀಧರ್, ಪ್ರೊ.ರಘು, ಪ್ರೊ.ಶ್ರುತಿ, ಪ್ರೊ. ಕೀರ್ತಿಕುಂಬಾರ್, ಪ್ರೊ.ಅನುಪಮಾಶೆಟ್ಟರ್, ಪ್ರೊ..ಜಸ್ಲೀನ್, ರೆಡ್‌ಕ್ರಾಸ್‌ನ ಡಾ. ಶ್ಯಾಂಸುಂದರ್ ಇದ್ದರು.

ವಿಜಯವಾಣಿ ಚಿತ್ರ



ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಪ್ರಯುಕ್ತ ರಕ್ತದಾನ ಶಿಬಿರ ನಡೆಯಿತು.